ಡಾ॥ ಹೆಗ್ಗಪ್ಪ ಡಿ. ಲಮಾಣಿ (ಪ್ರಾಥಮಿಕ ಹಾಗೂ ಶಿಕ್ಷಣ ಸಚಿವರು) :

ಅ) 274

ಆ) ಶಿಕ್ಷಕರು ಮತ್ತು ಮಕ್ಕಳ ಅನುಪಾತದಂತೆ ಬೆಂಗಳೂರಿನಲ್ಲಿ ಹಚ್ಚುವರಿ ಕಂಡು ಬಂದ ಶಿಕ್ಷಕರನ್ನು ಗ್ರಾಮಾಂತರ ಪ್ರದೇಶದ ಶಾಲೆಗಳಿಗೆ 92-93ರ ಶೈಕ್ಷಣಿಕ ಮುಗಿದ ನಂತರ ಹುದ್ದೆ ಸಹಿತ ಸ್ಥಳಾಂತರಿಸಲಾಗುವುದು.

ಇ) (ಅ) ಉತ್ತರದಂತೆ ಕ್ರಮ ತೆಗೆದುಕೊಳ್ಳಲಾಗುವುದು.

<u>ವಿಷಯ : ರಾಜ್ಯದಲ್ಲಿ ಆಯುರ್ವೇದದಲ್ಲಿ (ಬಿ) ಫಾರ್ಮ ಕೋರ್ಸ್.</u>

944

ಶ್ರೀ ಎಂ. ನಾರಾಯಣಸ್ವಾಮಿ (ಬೇತಮಂಗಲ) : ಮಾನ್ಯ ವೈದ್ಯಕೀಯ ಶಿಕ್ಷಣ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ರಾಜ್ಯದಲ್ಲಿ ಆಯುರ್ವೇದದಲ್ಲಿ ಬಿ. ಫಾರ್ಮ ಕೋರ್ಸ್ ಇಲ್ಲ ಎನ್ನುವುದು ಸರ್ಕಾರಕ್ಕೆ ಗೊತ್ತಿದೆಯೇ?

ಆ) ಆಯುರ್ವೇದ ಔಷಧಾಲಯಃಆಸ್ಪತ್ರೆ ಮತ್ತು ಇತರೆ ಔಷಧಿ ಅಂಗಡಿಗಳಲ್ಲಿ ತರಭೇತಿಯಿಲ್ಲದವರನ್ನು ನೇಮಿಸಿಕೊಂಡಿರುವುದು ನಿಜವೇ?

ಇ) ಮುಂದಿನ ಶೈಕ್ಷಣಿಕ ವರ್ಷ 1993-94 ರಿಂದ ಆಸ್ಪತ್ರೆಗಳು ಮತ್ತು ಔಷಧಿ ಅಂಗಡಿಗಳಲ್ಲಿ ತರಬೇತಿ ಪಡೆದ ಔಷಧಿ ವಿತರಕರನ್ನು ನೀಡಲು ಸರ್ಕಾರವು ಆಯುರ್ವೆದದಲ್ಲಿ 'ಬ' ಫಾರ್ಮ ಕೋರ್ಸ್ ಪ್ರಾರಂಭಿಸಲು ಕ್ರಮ ಕೈಗೊಳ್ಳುವುದೇ?

ಶ್ರೀ ಜಿ. ರಾಮಕೃಷ್ಣ (ವೈದ್ಯಕೀಯ ಶಿಕ್ಷಣಮಂತ್ರಿಗಳು) :

ಅ) ಹೌದು

ಆ) ಇಲ್ಲ

ಇ) ಇಲ್ಲ.

<u>ವಿಷಯ : ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡಗಳ ಕಾನೂನು 1969 ರಡಿಯಲ್ಲಿ ದಾಖಲಿಸಿದ ಪ್ರಕರಣಗಳು.</u>

1145

ಶ್ರೀ ಅಂಜನಮೂರ್ತಿ (ನೆಲಮಂಗಲ) : ಮಾನ್ಯ ರಾಜ್ಯ ಗೃಹ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕಳೆದ 5 ವರ್ಷಗಳಿಂದ ರಾಜ್ಯದಲ್ಲಿ ಪರಿಶಿಷ್ಟ ಜಾತಿಗಳ ಮತ್ತು ಪರಿಶಿಷ್ಟ ಪಂಗಡಗಳ (ಅತ್ಯಾಚಾರಗಳ ನಿರೋಧಕ) ಕಾನೂನು, 1989ರ ಅಡಿಯಲ್ಲಿ ದಾಖಲಿಸಿದ ಪ್ರಕರಣಗಳು ಎಷ್ಟು?

ವರ್ಷ	ವರದಿಯಾದ ಮೊಕದ್ದಮೆಗಳು	ಸುಳ್ಳು ಮೊಕದ್ದಮೆಗಳು	ನಿಜವಾದ ಮೊಕದ್ದಮೆಗಳು	ನ್ಯಾಯಾಲಯದಲ್ಲಿ ವಿಚಾರಣಾ ಹಂತದಲ್ಲಿರುವ ಮೊಕದ್ದಮೆಗಳು	ತನಿಖೆಯಲ್ಲಿರುವ ಮೊಕದ್ದಮೆಗಳು	ನ್ಯಾಯಾಲಯದಲ್ಲಿ ಶಿಕ್ಷೆಯಾದ ಮೊಕದ್ದಮೆಗಳು	ನ್ಯಾಯಾಲಯದಲ್ಲಿ ಖುಲಾಸೆಯಾದ ಮೊಕದ್ದಮೆಗಳು	ರಾಜೀಯಾದ ಮೊಕದ್ದಮೆಗಳು	ಇತರ ರೀತಿಯಲ್ಲಿ ವಿಲೇವಾರಿಯಾದ ಮೊಕದ್ದಮೆಗಳು	'ಬಿ' ಮತ್ತು 'ಸಿ' ವರದಿ
1	2	3	4	5	6	7	8	9	10	11
1990	529	35	494	360	-	15	74	12	31	2
1991	638	54	584	509	15	1	35	9	9	6
1992	743	45	698	410	270	-	5	1	7	5
1993 31.1.93 ರವರೆಗೆ	31	-	31	3	28	-	-	-	-	-
ಒಟ್ಟು	1941									

ಆ) ಈ ಪ್ರಕರಣಗಳು ಯಾವ ಹಂತದಲ್ಲಿ ಇವೆ?

ಶ್ರೀ ಬಿ. ರಮಾನಾಥ್ ರೈ (ಗೃಹ ರಾಜ್ಯ ಸಚಿವರು) :

ಅ) 1941 ಪ್ರಕರಣಗಳು.
ಆ) ಅನುಬಂಧದಲ್ಲಿ ನೀಡಲಾಗಿದೆ. (ಅನುಬಂಧವನ್ನು ಪುಟ 62ರಲ್ಲಿ ನೀಡಲಾಗಿದೆ)

ವಿಷಯ : ಸಿಂಧನೂರು ತಾಲ್ಲೂಕು ಧಡೆಸಗೂರು ಗ್ರಾಮದ ಶೀಥಲೀ ಕೇಂದ್ರ ಯೋಜನೆಯ ಪ್ರಗತಿ.

1288
ಶ್ರೀ ಬಿ. ಹಂಪನಗೌಡ (ಸಿಂಧನೂರು) : ಮಾನ್ಯ ಪಶುಸಂಗೋಪನಾ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಸಿಂಧನೂರು ತಾಲ್ಲೂಕು ಧಡೆಸುಗೂರು ಗ್ರಾಮದ ಶೀಥಲಿ ಕೇಂದ್ರ ಯೋಜನೆಯ ಯಾವ ಹಂತದಲ್ಲಿದೆ?
ಆ) ಈ ಯೋಜನೆಗೆ ಮಂಜೂರಾದ ಹಣವೆಷ್ಟು?

ಶ್ರೀ ಕೆ.ಎನ್. ನಾಗೇಗೌಡ (ಪಶುಸಂಗೋಪನಾ ರಾಜ್ಯ ಸಚಿವರು) :

ಅ) ಸಿವಿಲ್ ಕಾಮಗಾರಿ ಕೆಲಸಗಳು ದಿನಾಂಕ 3-2-93 ರಿಂದ ಪ್ರಾರಂಭವಾಗಿದ್ದು, ರಾಷ್ಟ್ರೀಯ ಹೈನು ಅಭಿವೃದ್ಧಿ ಮಂಡಳಿಯವರಿಗೆ ಉಪಕರಣಗಳನ್ನು ಅಭಿವೃದ್ಧಿ ಮಂಡಳಿಯವರಿಗೆ ಸರಬರಾಜು ಮಾಡಲು ಬೇಡಿಕೆ ಸಲ್ಲಿಸಿದ್ದು ಇದರಲ್ಲಿ ಕೆಲವು ಉಪಕರಣಗಳು ಈಗಾಗಲೇ ಬಂದಿರುತ್ತದೆ.
ಆ) ರೂ. 71.50 ಲಕ್ಷ

ವಿಷಯ : ಅರಣ್ಯ ಇಲಾಖೆ ದಿನಗೂಲಿ ಶಾಸಕರು.

1289
ಹೆಚ್. ಎಂ. ರೇವಣ್ಣ(ಮಾಗಡಿ) : ಮಾನ್ಯ ಅರಣ್ಯ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದ ಅರಣ್ಯ ಇಲಾಖೆಯಲ್ಲಿ ಎಷ್ಟು ಜನ ದಿನಗೂಲಿ ನೌಕರರು ಎಷ್ಟು ವರ್ಷಗಳಿಂದ ಸೇವೆ ಸಲ್ಲಿಸುತ್ತಿದ್ದಾರೆ?
ಆ) ಇವರಿಗೆ ಮಾಸಿಕ ಎಷ್ಟು ವೇತನ ನೀಡಲಾಗುತ್ತಿದೆ?
ಇ) ಇವರನ್ನು ಯಾವಾಗ ಖಾಯಂಗೊಳಿಸಲಾಗುವುದು?

ಶ್ರೀ ಎಂ.ಪಿ. ಕೇಶವಮೂರ್ತಿ (ಅರಣ್ಯ ರಾಜ್ಯ ಸಚಿವರು) :
ಅ) ಅರಣ್ಯ ಇಲಾಖೆಯಲ್ಲಿ 8668 ದಿನಗೂಲಿ ನೌಕರರಿದ್ದು ಇದರಲ್ಲಿ 4597 ದಿನಗೂಲಿ